# ಕುರುಡು ನಾಯಿ ತಾ ಸಂತೆಗೆ ಬಂತಂತೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 189.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 353.
3. **Note:** Lyrics given here are as per Ref. 1. The wordings in Ref. 2 are similar to Ref. 1. Singer has followed these lyrics.

ರಾಗ: ಪೂರ್ವಿ ತಾಳ: ಆದಿ

ಕುರುಡು ನಾಯಿ ತಾ ಸಂತೆಗೆ ಬಂತಂತೆ
ಅದು ಏತಕೆ ಬಂತೋ || ಪ ||

ಖಂಡ ಸಕ್ಕರೆ ಹಿತವಿಲ್ಲವಂತೆ
ಖಂಡ ಎಲುಬು ಕಡಿದಿತಂತೆ
ಹೆಂಡಿರ ಮಕ್ಕಳ ನೆಚ್ಚಿತಂತೆ
ಕೊಂಡು ಹೋಗುವಾಗ ಯಾರಿಲ್ಲವಂತೆ || 1 ||

ಭರದಿ ಅಂಗಡಿ ಹೊಕ್ಕಿತಂತೆ
ತಿರುವಿ ದೊಣ್ಣೆಯಲಿ ಇಕ್ಕಿದರಂತೆ
ಮರೆತರಿನ್ನು ವ್ಯರ್ಥವಂತೆ
ನರಕದೊಳಗೆ ಬಿದ್ದಿತಂತೆ || 2 ||

ವೇದ ವಾದಗಳನೋದಿತಂತೆ
ಗಾದೆ ಮಾಡಿ ಬಿಟ್ಟಿತಂತೆ
ಹಾದಿ ತಪ್ಪಿ ನಡೆದು ಯಮನ
ಬಾಧೆಗೆ ತಾ ಗುರಿಯಾಯಿತಂತೆ || 3 ||

ನಾನಾ ಜನ್ಮವನೆತ್ತಿತಂತೆ

ಮಾನವನಾಗಿ ಹುಟ್ಟಿತಂತೆ
ಕಾನನ ಕಾನನ ತಿರುಗಿತಂತೆ
ತಾನು ತನ್ನನೆ ಮರೆಯಿತಂತೆ || 4 ||

ಮಂಗನ ಕೈಯ ಮಾಣಿಕ್ಯವಂತೆ
ಹಾಂಗೂ ಹೀಂಗೂ ಕಳೆದೀತಂತೆ
ರಂಗ ಪುರಂದರ ವಿಠಲನ ಮರೆತು
ಭಂಗ ಬಹಳ ಪಟ್ಟಿತಂತೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕುರುಡು ನಾಯಿ** – ಆದ್ಯಪರಾಧವಾದ ಅನ್ಯಥಾ ಜ್ಞಾನದಿಂದ ಕೂಡಿರುವ ಜೀವ.

**ಸಂತೆ** – ಸಂಸಾರ.

**ಖಂಡ ಸಕ್ಕರೆ** – ಸ್ವರೂಪ ಜ್ಞಾನ; ಅನಂದ.

**ಅಂಗಡಿ...** – ಕರ್ಮವಿಪಾಕ; ಅದರಿಂದ ಬರುವ ದುಃಖ.

**ವೇದ ವಾದಗಳು** – ನಾಲ್ಕು ವೇದಗಳು, ನ್ಯಾಯವೇ ಮೊದಲಾದ ಶಾಸ್ತ್ರಗಳು.

**ಹಾದಿ ತಪ್ಪಿ** – ಸಾಧನಾ ಮಾರ್ಗವನ್ನು ಬಿಟ್ಟು.

**ತಾನು ತನ್ನನು ಮರೆಯಿತಂತೆ** – ಸ್ವರೂಪ ವಿಸ್ಮೃತಿ.

**ಹಾಂಗೂ ಹೀಂಗೂ** – ಇಹ ಪರಗಳೆರಡನ್ನೂ.

**ರಂಗ...** – ಹರಿ ವಿಸ್ಮೃತಿಯಿಂದ.

**Classification:** Mundige
**Ankita:** purandara vittala
**Location:** NA
**Category:** Jeevan Darshana
**Sub-Category:** kurudu, nayi, sante, sakkare, makkalu, patni, naraka, veda, yama, dAri, janma, huttu, nara, kaadu, koti, ranga, pravachana, Vid. Shrisha Bhat Mudarangadi
**Pravachana:** Vid. Shrisha Bhat Mudarangadi
**Explanation:** NA